# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ದಿನಾಂಕ:28ನೇ ಜೂನ್ 2012

ಸಂಖ್ಯೆ:ಅ4[1]ಶಾ.ಬ್ಯಾ:03:2011-12

## : ಜ್ಞಾ ಪ ನ:

**ವಿಷಯ**: 2012-13ನೇ ಸಾಲಿನ ಪ್ರೋತ್ಸಾಹದಾಯಕ ಕಾರ್ಯಕ್ರಮದಡಿಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 1,5 ಮತ್ತು 07ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶಾಲಾಬ್ಯಾಗ್ ವಿತರಿಸಲು ಜಿಲ್ಲಾವಾರು ಆರ್ಥಿಕಗುರಿ ನಿಗದಿ ಮತ್ತು ಹಣ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ**: ಸರ್ಕಾರದ ಆದೇಶದ ಸಂಖ್ಯೆ:ಇಡಿ:164:ಯೋಯೋಕಾ:2012, ದಿ:11.06.2012.
2] ಈ ಕಛೇರಿಯ ಜ್ಞಾಪನಾ ಪತ್ರ ಸಮ ಸಂಖ್ಯೆ ದಿನಾಂಕ:21.06.2012.

ಉಲ್ಲೇಖ [2]ರ ಈ ಕಛೇರಿ ಜ್ಞಾಪನ ಪತ್ರದ ಕಡೆ ಗಮನಸೆಳೆಯುತ್ತಾ, 2012-13ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲಿ 01, 05 ಮತ್ತು 07ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಠ ಜಾತಿ/ ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶಾಲಾಬ್ಯಾಗ್ ವಿತರಣೆ ಸಂಬಂಧ ವಿವರವಾದ ಸೂಚನೆ ಮತ್ತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮತ್ತು ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆ, ತಗಲುವ ವೆಚ್ಚಕ್ಕೆ ಸಂಬಂಧಿಸಿದಂತೆ ಉಲ್ಲೇಖ [2]ರ ಪತ್ರದಲ್ಲಿ ತಿಳಿಸಲಾಗಿದೆ. ಈ ಜ್ಞಾಪನದಲ್ಲಿ ವಿವರಿಸಿರುವ ಎಲ್ಲಾ ಸೂಚನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಕೆಳಕಂಡಂತೆ ಪ್ರತಿಯೊಂದು ಜಿಲ್ಲೆಗೂ ಆಯಾ ಜಿಲ್ಲೆಗಳ ಫಲಾನುಭವಿಗಳ ಆಧಾರದ ಮೇಲೆ ಒಂದು ಶಾಲಾಬ್ಯಾಗ್‌ನ ಬೆಲೆ ರೂ85/=[ಎಂಭತ್ತೈದು ರೂಪಾಯಿಗಳು ಮಾತ್ರ] ವಾರ್ಷಿಕ ಆರ್ಥಿಕ ಗುರಿಯನ್ನು ಕಾಲಂ:03ರಂತೆ ನಿಗದಿಪಡಿಸಿದೆ. ಹಾಗೂ ಕಲಂ:04ರಲ್ಲಿ ಖರ್ಚು ಭರಿಸಲು ಅನುಕೂಲವಾಗುವಂತೆ ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಬಿಡುಗಡೆ ಮಾಡಿದೆ. ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಶಾಲಾಬ್ಯಾಗ್ ಖರ್ಚಿನ ಪ್ರಕಾರ ಬಿಲ್ಲುಗಳಿಗೆ ಮೇಲು ಸಹಿ ಮಾಡುವುದು.

ಹೀಗೆ ಬಿಡುಗಡೆ ಮಾಡಿದ ಹಣವನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಡ್ರಾ ಮಾಡಿ ಸಂಬಂಧಿಸಿದ ಎಸ್.ಡಿ.ಎಂ.ಸಿ ಖಾತೆಗಳಿಗೆ ಜಮಾ ಮಾಡುವಂತೆ ಶಾಲಾ ಮುಖ್ಯಶಿಕ್ಷಕರಿಗೆ ಕ್ರಾಸ್ ಚೆಕ್ ಮೂಲಕವೇ ಹಣ ಪಾವತಿ ಮಾಡಬೇಕೆಂದು ತಪ್ಪದೇ ಸೂಚನೆ ನೀಡುವುದು. ಈಗ ಕಲಂ:04ರಲ್ಲಿ ಬಿಡುಗಡೆ ಮಾಡಿರುವ ಹಣವನ್ನು ನಿಗದಿತ ಅವಧಿಯೊಳಗಾಗಿ ಖರ್ಚು ಭರಿಸಿ, ನಿಗದಿತ ಅವಧಿಯೊಳಗೆ ಅರ್ಹ ಫಲಾನುಭವಿಗಳಿಗೆ ಶಾಲಾ ಬ್ಯಾಗ್‌ಗಳನ್ನು ವಿತರಣೆ ಮಾಡಲು ಸೂಚನೆ ನೀಡಲಾಗಿದೆ.

***[ಲೆಕ್ಕ ಶೀರ್ಷಿಕೆ:2202-02-107-0-03-422] ರೂ.5.00 ಕೋಟಿ***

| ಕ್ರಮ ಸಂಖ್ಯೆ | ತಾಲ್ಲೂಕಿನ ಹೆಸರು | 1, 5 & 7ನೇ ತರಗತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ | ಬಿಡುಗಡೆ ಮಾಡಿರುವ ಹಣ |
|---|---|---|---|
| 01. | ಬಾಗಲಕೋಟೆ | 23658 | 2010930 |
| 02. | ಬೆಳಗಾಂ ಜಿಲ್ಲೆ | 17544 | 1491240 |
| 03. | ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ. | 24849 | 2112165 |
| 04. | ಬಳ್ಳಾರಿ ಜಿಲ್ಲೆ | 50268 | 4272780 |
| 05. | ಬೀದರ್ ಜಿಲ್ಲೆ | 33034 | 2807890 |
| 06. | ಬಿಜಾಪುರ ಜಿಲ್ಲೆ | 28066 | 2385610 |
| 07. | ಚಿಕ್ಕಬಳ್ಳಾಪುರ ಜಿಲ್ಲೆ. | 20593 | 1750405 |
| 08. | ಚಿಕ್ಕಮಗಳೂರು ಜಿಲ್ಲೆ | 13658 | 1160930 |
| 09. | ಚಿತ್ರದುರ್ಗ ಜಿಲ್ಲೆ | 32164 | 2733940 |
| 10. | ದಕ್ಷಿಣ ಕನ್ನಡ ಜಿಲ್ಲೆ | 8169 | 694365 |
| 11. | ದಾವಣಗೆರೆ ಜಿಲ್ಲೆ | 27496 | 2337160 |
| 12. | ಧಾರವಾಡ ಜಿಲ್ಲೆ | 10888 | 925480 |
| 13. | ಗದಗ್ ಜಿಲ್ಲೆ | 12292 | 1044820 |
| 14. | ಗುಲ್ಬರ್ಗಾ ಜಿಲ್ಲೆ | 37663 | 3201355 |

| | | | |
|---|---|---|---|
| 15. | ಹಾಸನ ಜಿಲ್ಲೆ | 16352 | 1389920 |
| 16. | ಹಾವೇರಿ ಜಿಲ್ಲೆ | 17454 | 1483590 |
| 17. | ಕೊಡಗು ಜಿಲ್ಲೆ | 6500 | 552500 |
| 18. | ಕೋಲಾರ ಜಿಲ್ಲೆ | 21107 | 1794095 |
| 19. | ಕೊಪ್ಪಳ ಜಿಲ್ಲೆ | 25188 | 2140980 |
| 20. | ಮಂಡ್ಯ ಜಿಲ್ಲೆ | 10113 | 859605 |
| 21. | ರಾಯಚೂರು ಜಿಲ್ಲೆ | 41413 | 3520105 |
| 22. | ರಾಮನಗರ ಜಿಲ್ಲೆ | 8135 | 691475 |
| 23. | ಶಿವಮೊಗ್ಗ ಜಿಲ್ಲೆ | 15888 | 1350480 |
| 24. | ತುಮಕೂರು ಜಿಲ್ಲೆ | 13374 | 1136790 |
| 25. | ಮಧುಗಿರಿ ಜಿಲ್ಲೆ | 16079 | 1366715 |
| 26. | ಉತ್ತರ ಕನ್ನಡ ಜಿಲ್ಲೆ | 2650 | 225250 |
| 27. | ಯಾದಗಿರಿ ಜಿಲ್ಲೆ | 23025 | 1957125 |
| 28. | ಚಾಮರಾಜನಗರ ಜಿಲ್ಲೆ | 12625 | 1073125 |
| 29. | ಮೈಸೂರು ಜಿಲ್ಲೆ | 32243 | 1529175 |
| | | **ಒಟ್ಟು** | **5,0,000,000** |

**[ಲೆಕ್ಕ ಶೀರ್ಷಿಕೆ:2202-02-107-03-02-101] ರೂ.54,07,930/-**

| | | | |
|---|---|---|---|
| 01. | ಬೆಂಗಳೂರು ಗ್ರಾಮಾಂತರ | 11551 | 981835 |
| 02. | ಬೆಂಗಳೂರು ಉತ್ತರ ಜಿಲ್ಲೆ | 11064 | 940440 |
| 03. | ಬೆಂಗಳೂರು ದಕ್ಷಿಣ | 18152 | 1542920 |
| 04. | ಶಿರಸಿ ಶೈಕ್ಷಣಿಕ ಜಿಲ್ಲೆ | 4483 | 381055 |
| 05. | ಉಡುಪಿ ಜಿಲ್ಲೆ | 4120 | 350220 |
| 06. | ಮೈಸೂರು ಜಿಲ್ಲೆ | 32243 | 1211480 |
| | | **ಒಟ್ಟು** | **54,07,930** |

***ವಿಶೇಷ ಸೂಚನೆ***:-ಮೈಸೂರು ಜಿಲ್ಲೆಯ ರೂ.27,40,655/ರ ಪೈಕಿ ರೂ.15,29,175/ನ್ನು ಲೆಕ್ಕಶೀರ್ಷಿಕೆ 2202-02-107-0-03-422 ರಲ್ಲಿ ಹಾಗೂ ರೂ.12,11,480/ನ್ನು ಲೆಕ್ಕ ಶೀರ್ಷಿಕೆ 2202-02-107-03-02-101 ಸೆಳೆಯತಕ್ಕದ್ದು.

ಮೇಲೆ ವಿವರಿಸಿದಂತೆ ಶಾಲಾಬ್ಯಾಗ್ ಖರೀದಿಸಿ ಮಕ್ಕಳಿಗೆ ವಿತರಿಸುವ ಬಗ್ಗೆ ಜಿಲ್ಲಾವಾರು ಆರ್ಥಿಕ ಗುರಿ ನಿಗದಿಪಡಿಸಿ, ಮೇಲ್ಕಂಡ ಆಯವ್ಯದ ಮಿತಿಯೊಳಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು. ತಮ್ಮ ವ್ಯಾಪ್ತಿಯ ತಾಲ್ಲೂಕುವಾರು ವೆಚ್ಚದ ಮಾಹಿತಿಯನ್ನು ಕ್ರೋಢೀಕರಿಸಿ, ಉಪಯೋಗಿತ ಪ್ರಮಾಣ ಪತ್ರವನ್ನು ದಿ:30.08.2012ರೊಳಗಾಗಿ ಸಲ್ಲಿಸಲು ತಿಳಿಸಿದೆ. ಹಾಗೂ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಹಣ ಉಳಿತಾಯವಾಗುವ ಸಂಭವವಿದ್ದಲ್ಲಿ ಉಳಿಕೆ ಹಣವನ್ನು ಬೇರೆ ಯಾವುದೇ ಕಾರ್ಯಕ್ರಮಕ್ಕೆ ಉಪಯೋಗಿಸತಕ್ಕದ್ದಲ್ಲವೆಂದು ಸ್ಪಷ್ಟವಾಗಿ ಸೂಚಿಸಿದೆ. ಈ ಉಳಿಕೆ ಹಣವನ್ನು ಸರ್ಕಾರಕ್ಕೆ ನಿಗದಿತ ಅವಧಿಯೊಳಗೆ ಜಮಾ ಮಾಡಲು ತಿಳಿಸಿದೆ.

[ಎ.ದೇವಪ್ರಕಾಶ್]

ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

## ಇವರಿಗೆ:

01. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001, ಗೌರವ ಪೂರ್ವಕ ಮಾಹಿತಿಗಾಗಿ.
02. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ. ಇವರಿಗೆ ಮಾಹಿತಿಗಾಗಿ.
03. ರಾಜ್ಯದ ಎಲ್ಲಾ ಉಪ ನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ.
04. ಉಪ ನಿರ್ದೇಶಕರು [ಯೋಜನೆ], ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು. ಇವರಿಗೆ ಕಳುಹಿಸುತ್ತಾ, ಕಲಂ:04ರಲ್ಲಿ ಬಿಡುಗಡೆ ಮಾಡಿರುವ ಹಣವನ್ನು ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಎನ್.ಎಂ.ಸಿ ನಲ್ಲಿ ಅಪ್‌ಲೋಡ್ ಮಾಡಲು ಕ್ರಮವಹಿಸುವುದು.
05. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
06. ಕಛೇರಿ ಪ್ರತಿ. DNR\\Typing3server\typing3server\D\CPE\853-12.doc